<u>ಅಸಲು ದಾವಾ ಸಂಖ್ಯೆ: **340/2014**</u>  ಡಿ.ಡಬ್ಲ್ಯೂ.:- **1**

ದಿನಾಂಕಃ **28.06.2022** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು:- ವಾದಿ ಪರ ವಕೀಲರಿಂದ:-</u>**

ನನ್ನ ತಂದೆಯ ಹೆಸರು ಮಾಯಪ್ಪ. ನನ್ನ ಅಜ್ಜನ ಹೆಸರು ಸಣ್ಣ ತಮ್ಮಣ್ಣ. ನನ್ನ ತಂದೆಗೆ ಇಬ್ಬರು ಹೆಂಡತಿಯರು. ವಾದಿ ನನ್ನ ಅಕ್ಕ ಎಂದು ನನ್ನ ತಂದೆಯವರು ಹೇಳುತ್ತಿದ್ದರು. ವಾದಿಯು ನನ್ನ ತಂದೆಯ ಮೊದಲನೆ ಹೆಂಡತಿಯ ಮಗಳು ಎಂದರೆ ಸರಿ. ನನ್ನ ತಂದೆ ವಾದಿಯ ತಾಯಿಯು ಜೀವಂತವಿದ್ದಾಗ ನನ್ನ ತಾಯಿಯನ್ನು ವಿವಾಹವಾಗಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ತಾಯಿಯ ಹೆಸರು ಕೆಂಚಮ್ಮ. ವಾದಿಯ ತಾಯಿಯ ಹೆಸರು ನನಗೆ ಗೊತ್ತಿಲ್ಲ. ವಾದಿಯ ತಾಯಿಯ ಹೆಸರು ಕೆಂಚಮ್ಮ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿಗೆ ಗಾಯಿತ್ರಮ್ಮ, ಚಂದ್ರಪ್ಪ , ನಾಗರಾಜ್, ಹಳದಪ್ಪ , ಕೆಂಚಪ್ಪ ಮತ್ತು ರಾಜಪ್ಪ ಎಂಬ 6 ಮಕ್ಕಳು. ನನ್ನ ತಂದೆಯ ಮೊದಲನೇಯ ಹೆಂಡತಿಗೆ ಎಷ್ಟು ಜನ ಮಕ್ಕಳು ಎಂಬುವುದು ನನಗೆ ಗೊತ್ತಿಲ್ಲ. ವಾದಿಯ ತಾಯಿ ಜೀವಂತವಿದ್ದಾಗಲೇ ನನ್ನ ತಂದೆ ನನ್ನ ತಾಯಿಯನ್ನು ವಿವಾಹವಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನಮ್ಮ ಕುಟುಂಬದ ಆಸ್ತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಹಾಗೂ ಅವುಗಳ ಸರ್ವೆ ನಂಬರ್ ಮತ್ತು ವಿಸ್ತೀರ್ಣದ ಬಗ್ಗೆಯು ನನಗೆ ಗೊತ್ತಿರುವುದಿಲ್ಲ. ಬಲಮುರಿ ಗ್ರಾಮ ಸರ್ವೆ ನಂ. 17 ಮತ್ತು 18 ರಲ್ಲಿ ನಮ್ಮ ಕುಟುಂಬಕ್ಕೆ ಸೇರಿದ ಜಮೀನು ಇದೆ ಎಂದರೆ ಸರಿ.ಅವುಗಳ ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ಸರ್ವೆ ನಂ. 18 ರ ವಿಸ್ತೀರ್ಣ 7 ಎಕರೆ 29 ಗುಂಟೆ ಜಮೀನಿನ ಪಹಣಿ ಪತ್ರಿಕೆಯು ನನ್ನ, ನನ್ನ ತಾಯಿ ಮತ್ತು ಸಹೋದರರ ಜಂಟಿ ಹೆಸರಿನಲ್ಲಿ ಇದೆ ಎಂದರೆ ಸರಿ .

**ಮುಂದುವರೆ ಪಾಟೀ ಸವಾಲುನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು .**

**ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.**

**ಓ. ಹೇ. ಕೇ. ಸ. ಇದೆ.**

**ಸಿ/ಸಿ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಹೊನ್ನಾಳಿ.**

**ಅಸಲು ದಾವಾ ಸಂಖ್ಯೆ 104/2015** **ಡಿ.ಡಬ್ಲ್ಯೂ.:- 1**

ದಿನಾಂಕಃ **28.06.2022** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-**

ದಾವಾ ಸ್ವತ್ತಿನ ಮನೆಯಲ್ಲಿ

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

**ಪ್ರಧಾನ** ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., **ಹೊನ್ನಾಳಿ.**